## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1520(1452) |
| ಸದಸ್ಯರ ಹೆಸರು | : | ಶ್ರೀತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 19.12.2025 |
| ಉತ್ತರಿಸುವ ಸಚಿವರು | : | ಸನ್ಮಾನ್ಯ ಮುಖ್ಯಮಂತ್ರಿಯವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ತಳವಾರ ಮತ್ತು ಪರಿವಾರ ಜಾತಿಗಳನ್ನು ಸಂವಿಧಾನ (ಪರಿಶಿಷ್ಟ ಪಂಗಡಗಳು) ಆದೇಶ (ತಿದ್ದುಪಡಿ) ಕಾಯ್ದೆ 2020 ರ ಅನ್ವಯ ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಲಾಗಿರುವುದರಿಂದ ದಿನಾಂಕ:30.03.2002ರ ಸರ್ಕಾರಿ ಆದೇಶದಲ್ಲಿ ತಳವಾರ ಮತ್ತು ಪರಿವಾರ ನಾಯಕ ಜಾತಿಯನ್ನು ಹಿಂದುಳಿದ ವರ್ಗಗಳ ಮೀಸಲಾತಿ ಪಟ್ಟಿಯಿಂದ ತೆಗೆದು ಹಾಕಿರುವುದು ನಿಜವೇ; | The Government of India vide The Constitution (Scheduled Tribes) Order (Amendment) Act. 2020 issued Gazette notification dated:19.03.2020 with respect to the Scheduled Tribes list of Karnataka at serial no.38 and 50 as mentioned below:-<br><br>An Act further to amend the the Constitution (Scheduled Tribes) Order, 1950 , to modify the list of the Schedule Tribes in the State of Karnataka.<br><br>(a) In entry 38. For the words "Naikda, Nayaka', the words and brackets "Naikda, Nayaka (including Parivara and Talawara)" shall be substituted: ಎಂದು ಅಧಿಸೂಚನೆ ಹೊರಡಿಸಿರುತ್ತದೆ.<br><br>ಹಿಂದುಳಿದ ವರ್ಗಗಳ ಇಲಾಖೆಯ ಆದೇಶ ಸಂಖ್ಯೆ:ಹಿಂವಕ 26 ಬಿಸಿಎ 2022 ಬೆಂಗಳೂರು ದಿನಾಂಕ:29.10.2022 ರಲ್ಲಿ ಕರ್ನಾಟಕ ಸರ್ಕಾರದ ಹಿಂದುಳಿದ ವರ್ಗಗಳ ಮೀಸಲಾತಿ ಜಾತಿ ಪಟ್ಟಿಯ ಆದೇಶ ಸಂಖ್ಯೆ:ಸಕಇ 225 ಬಿಸಿಎ 2000 ದಿನಾಂಕ:30.03.2002ರ ಪ್ರವರ್ಗ-1ರ 88(ಹೆಚ್)ನಲ್ಲಿನ ತಳವಾರ (Talawara) ಜಾತಿ ಹಾಗೂ ಪ್ರವರ್ಗ-1ರ 88(ಕೆ)ನಲ್ಲಿನ ಪರಿವಾರ ನಾಯಕ (Parivara Nayaka) ಜಾತಿಗಳನ್ನು ಹಿಂದುಳಿದ ವರ್ಗಗಳ ಮೀಸಲಾತಿ ಜಾತಿ ಪಟ್ಟಿಯಿಂದ ತೆಗೆದುಹಾಕಿ ಆದೇಶಿಸಿದೆ. |

516

| | | |
|---|---|---|
| ಆ) | ಈ ಮೇಲ್ಕಂಡ ಆದೇಶ ಸಮಗ್ರ ಕರ್ನಾಟಕದ ಎಲ್ಲ ತಳವಾರ ಮತ್ತು ಪರಿವಾರ ಸಮುದಾಯಕ್ಕೆ ಅನ್ವಯಿಸಿದ್ದರೂ ರಾಜ್ಯದಲ್ಲಿ ಇವರುಗಳಿಗೆ ಪರಿಶಿಷ್ಟ ಪಂಗಡದ ಪ್ರಮಾಣ ಪತ್ರ ನೀಡುವಲ್ಲಿ ಅಧಿಕಾರಿಗಳ ಮಟ್ಟದಲ್ಲಿ ತೊಂದರೆ, ಕಿರುಕುಳ ಉಂಟಾಗುತ್ತಿರಲು | ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) ಅಧಿನಿಯಮ 1990 ನಿಯಮಗಳು 1992 ರಡಿ ಇರುವ ಅಂಶಗಳಂತೆ ಪರಿಶಿಷ್ಟ ಪಂಗಡದ ಜಾತಿ ಪ್ರಮಾಣ ಪತ್ರವನ್ನು ನೀಡುವಾಗ ಆಯಾ ತಾಲ್ಲೂಕಿನ ತಹಶೀಲ್ದಾರರು ಪಾಲಿಸಬೇಕಾಗಿರುವ ಕಾರ್ಯವಿಧಾನವನ್ನು ಕಡ್ಡಾಯವಾಗಿ ಪಾಲಿಸಿ ನಿಯಮಾನುಸಾರ Naikda, Nayaka ಸಮುದಾಯದ ಪರ್ಯಾಯ ಪದ (Synonym) ಜಾತಿಗಳಾದ ತಳವಾರ ಮತ್ತು ಪರಿವಾರ ಜಾತಿಗಳಿಗೆ ಜಾತಿ ಪ್ರಮಾಣ ಪತ್ರ ನೀಡುವಾಗ ಯಾವುದೇ ಗೊಂದಲಗಳು ಉದ್ಭವವಾಗದಂತೆ ಕ್ರಮವಹಿಸಲು ಜಾತಿ ಪ್ರಮಾಣ ಪತ್ರ ನೀಡುವ ಸಕ್ಷಮ ಪ್ರಾಧಿಕಾರವಾದ ಜಿಲ್ಲಾಧಿಕಾರಿಗಳು/ತಹಶೀಲ್ದಾರರುಗಳಿಗೆ ಸ್ಪಷ್ಟೀಕರಣ ನೀಡಲಾಗಿರುತ್ತದೆ. |
| ಇ) | ಈ ಸಮಸ್ಯೆ ನಿವಾರಣೆಗೆ ಅವರುಗಳಿಗೆ ಯಾವುದೇ ರೀತಿಯ ತೊಂದರೆ, ಕಿರುಕುಳ ಉಂಟಾಗದಂತೆ ಸರಾಗವಾಗಿ ಪರಿಶಿಷ್ಟ ಪಂಗಡದ ಪ್ರಮಾಣ ಪತ್ರ ಪಡೆಯಲು ಕೈಗೊಂಡಿರುವ ಕ್ರಮಗಳೇನು: | |
| ಈ) | ಕೈಗೊಳ್ಳಲಿರುವ ಕ್ರಮ ಮತ್ತು ಈ ಬಗ್ಗೆ ಹೊರಡಿಸಲಾಗಿರುವ ಸುತ್ತೋಲೆಗಳಾವುವು? ಮಾಹಿತಿ ಒದಗಿಸುವುದು. | ಪರಿಶಿಷ್ಟ ಪಂಗಡದ ತಳವಾರ ಮತ್ತು ಪರಿವಾರ ಜಾತಿ ಸಮುದಾಯದವರಿಗೆ ಪರಿಶಿಷ್ಟ ಪಂಗಡದ ಜಾತಿ ಪ್ರಮಾಣ ಪತ್ರ ನೀಡುವ ಕುರಿತಂತೆ ಸರ್ಕಾರದಿಂದ ಈ ಕೆಳಕಂಡ ಸುತ್ತೋಲೆಗಳನ್ನು ಹೊರಡಿಸಲಾಗಿದೆ.<br><br>1. ಸರ್ಕಾರದ ಸುತ್ತೋಲೆ ಸಂಖ್ಯೆ:ಸಕಇ 23 ಎಸ್ ಎಡಿ 2009, ದಿನಾಂಕ:06.06.2020.<br>2. CIRCULAR No.SWD 180 SAD 2020 (P), Dated: 29.01.2022.<br>3. ಸರ್ಕಾರದ ಸುತ್ತೋಲೆ ಸಂಖ್ಯೆ: ಸಕಇ 23 ಎಸ್ ಎಡಿ 2009, ದಿನಾಂಕ:31.08.2020.<br>4. ಸರ್ಕಾರದ ಸುತ್ತೋಲೆ ಸಂಖ್ಯೆ: STW/SECB/STP/315/2024, ದಿನಾಂಕ:07.02.2025 |

STW/SECB/SAD/155/2025

(ಸಿದ್ದರಾಮಯ್ಯ)
ಮುಖ್ಯಮಂತ್ರಿ